## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 788/2018

**ಸಾಕ್ಷಿಯನ್ನು ದಿಃ 30.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ಆರ್. ರಮೇಶ | ಪಿಡಬ್ಲ್ಯೂ:1 |
| ತಂದೆಯ ಹೆಸರು | ಲೇಟ್ ರಾಮಶೆಟ್ಟಿ | |
| ವಯಸ್ಸು | 56 ವರ್ಷ | |
| ಉದ್ಯೋಗ | ಎ.ಎಸ್.ಐ ಹುಣಸೂರು ಪಟ್ಟಣ ಪೊಲೀಸ್ ಠಾಣೆ | |
| ವಾಸಸ್ಥಳ | ಕೆ.ಆರ್ ನಗರ. | |

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 299 ರಡಿ ಸಾಕ್ಷಿ ವಿಚಾರಣೆ**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ದಿಃ 28.07.2022 ರಿಂದ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಕೇಸಿನಲ್ಲಿ ದಿಃ 21.12.2024 ರಂದು ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಹನಗೋಡು ಹೋಬಳಿ, ಕರ್ಣಕುಪ್ಪೆ ಗ್ರಾಮದಲ್ಲಿ ವಾಸ ಇರುವ ಆರೋಪಿ ಚಂದ್ರ ಬಿನ್ ಶಿವಣ್ಣ ರವರ ಮನೆ ಮುಂಭಾಗ ಪಂಚಾಯಿತಿದಾರರಾದ ಮಹದೇವಪ್ಪ ಮತ್ತು ಶ್ರೀಕಂಠ ರವರ ಸಮಕ್ಷಮ ನ್ಯಾಯಾಲಯದ ಸಿಸಿ ನಂ. 788/2018 ರಲ್ಲಿ ಆರೋಪಿ ಚಂದ್ರ ಬಿನ್ ಶಿವಣ್ಣ ರವರಿಗೆ ಹೊರಡಿಸಿದ ಉದ್ಘೋಷಣೆಯನ್ನು ದಿಃ 12.12.2024 ರಂದು ತೆಗೆದುಕೊಂಡಿದ್ದು, ಸದರಿ ಆರೋಪಿಯ ಬಗ್ಗೆ ಪಂಚಾಯಿತಿದಾರರಲ್ಲಿ ವಿಚಾರ ಮಾಡಲಾಗಿ ಆರೋಪಿ ಚಂದ್ರ ಬಿನ್ ಶಿವಣ್ಣ ಇವರು ಈಗ್ಗೆ 7 ವರ್ಷಗಳ ಹಿಂದೆ ಮನೆ ಬಿಟ್ಟು ಹೋದವರು ಇದುವರೆಗೂ ಮನೆಗೆ ಬಂದಿರುವುದಿಲ್ಲ ಎಂದು ಸದರಿ ರವರು ಎಲ್ಲಿಗೆ ಹೋಗಿರುತ್ತಾರೆ ಗೊತ್ತಿಲ್ಲ ಎಂದು ಪಂಚಾಯಿತದಾರರು ತಿಳಿಸಿರುತ್ತಾರೆ.

ಸದರಿ ಆರೋಪಿ ಪತ್ತೆ ಆದಲ್ಲಿ ದಿಃ 26.02.2025 ರಂದು ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಪಂಚಾಯಿತಿದಾರರಾಲ್ಲಿ ಉದ್ಘೋಷಣೆಯ ವಾರೆಂಟ್ ಅನ್ನು ಆರೋಪಿ ಚಂದ್ರ ಬಿನ್ ಶಿವಣ್ಣ ಇದ್ದ ಮನೆಯ ಬಾಗಿಲಿಗೆ ಅಂಟಿಸಲಾಯಿತು, ಇನ್ನೊಂದು ಪ್ರತಿಯನ್ನು ಕರ್ಣಕುಪ್ಪೆ ಗ್ರಾಮ ಪಂಚಾಯಿತಿ ನೊಟೀಸು ಬೋರ್ಡ್ ಅಲ್ಲಿ ಅಂಟಿಸಲಾಯಿತು, ನಂತರ ಕರ್ಣಕುಪ್ಪೆ ಗ್ರಾಮದಲ್ಲಿ ಟಾಂ ಟಾಂ ರೀತಿಯಲ್ಲಿ ಉದ್ಘೋಷಣೆಯನ್ನು ಏರು ಧ್ವನಿಯಲ್ಲಿ ಸಾರಿ ಸಾರಿ ಹೇಳಲಾಯಿತು. ಮತ್ತೊಂದು ಪ್ರತಿಯನ್ನು ನ್ಯಾಯಾಲಯದ ನೊಟೀಸು ಬೋರ್ಡ್ ಅಲ್ಲಿ ಅಂಟಿಸಿ ಉದ್ಘೋಷಣೆಯನ್ನು ಕಾರ್ಯಗತಗೊಳಿಸಲಾಯಿತು.

ಬೆಳಿಗ್ಗೆ 10.00 ರಿಂದ 11.00 ಗಂಟೆ ವರೆಗೆ ಮಹಜರ್ ಜರುಗಿಸಿರುತ್ತೇನೆ. ಸದರಿ ಮಹಜರ್ ಅನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು 1 (ಎ) ಎಂದು, ಪಂಚರಾದ ಮಹದೇವಪ್ಪ ಮತ್ತು ಶ್ರೀಕಂಠ ರವರ ಸಹಿಗಳನ್ನು ಕ್ರಮವಾಗಿ ನಿಪಿ. 1(ಬಿ ಮತ್ತು ಸಿ ) ಎಂದು ಗುರುತಿಸಲಾಯಿತು. ಉದ್ಘೋಷಣಾ ಸಮಯದಲ್ಲಿ ಮೊಬೈಲ್ ನಲ್ಲಿ ಎರಡು ಫೋಟೊಗಳನ್ನು ತೆಗೆದಿದ್ದು, ಪ್ರಿಂಟ್ ಪ್ರತಿಗಳನ್ನು ನಿಪಿ. 2 ಮತ್ತು 3 ಎಂದು ಗುರುತಿಸಲಾಯಿತು.

ಆರೋಪಿತನ ಹೆಸರಿನಲ್ಲಿ ಸ್ಥಿರಾಸ್ಥಿ ಇರುವ ಬಗ್ಗೆ ಅಟ್ಯಾಚ್ ಮೆಂಟ್ ವಾರೆಂಟ್ ಹೊರಡಿಸಿದ್ದು, ಕರ್ನಕುಪ್ಪೆ ಗ್ರಾಮ ಪಂಚಾಯಿತಿಯಲ್ಲಿ ಮನವಿ ಪತ್ರ ಸಲ್ಲಿಸಿಕೊಂಡಿದ್ದು ಸದರಿ ಮನವಿಯಲ್ಲಿ ಆರೋಪಿತನ ಹೆಸರಿನಲ್ಲಿ ಯಾವುದೆ ಸ್ಥಿರಾಸ್ಥಿ ಇರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ನಿಪಿ. 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃಆರೋಪಿ ತಲೆ ಮರಿಸಿಕೊಂಡಿರುತ್ತಾನೆ.**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.